# ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ

K.R.E.D.L

( Government of Karnataka Undertaking )

ಕೆ.ಆರ್.ಇ.ಡಿ.ಎಲ್/07/ಎಸ್.ಜಿ/ಭೂಮಾಲೀಕರು/ಎಫ್-283-ಬಿ/2017/2953 ದಿನಾಂಕ: 26.04.2017

ಇವರಿಗೆ,

ಶ್ರೀ ಬಿ.ಎಸ್. ಅನೂಪ್ ಕುಮಾರ್,

ನಂ.2, 2ನೇ ಮಹಡಿ, 41ನೇ ಅಡ್ಡ ರಸ್ತೆ, 4ನೇ ಬ್ಲಾಕ್,

ರಾಜಾಜಿನಗರ, ಬೆಂಗಳೂರು-560 010.

ಮಾನ್ಯರೇ,

ವಿಷಯ: ಸೌರ ನೀತಿ 2014-21ರ ಭೂಮಾಲೀಕತ್ವವುಳ್ಳ ರೈತರ 1-3 ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಯ ವರ್ಗದಡಿಯಲ್ಲಿ ಹಂಚಿಕೆಯಾದ ಘಟಕದ ಸ್ಥಳ ಬದಲಾವಣೆ ಕೋರಿ ಸಲ್ಲಿಸಿರುವ ಫಲಾನುಭವಿಗಳಿಗೆ ಅನುಮತಿ ನೀಡುವ ಕುರಿತು.

ಉಲ್ಲೇಖ:

1. ತಮ್ಮ ಪತ್ರ ದಿನಾಂಕ: 25.04.2017
2. ಕೆ.ಆರ್.ಇ.ಡಿ.ಎಲ್ ಪತ್ರ ಸಂಖ್ಯೆ: ಕೆ.ಆರ್.ಇ.ಡಿ.ಎಲ್/07/ಎಸ್‌ಜಿ/ಭೂಮಾಲೀಕರು/ಎಫ್-283-ಬಿ/2017/2660 ದಿನಾಂಕ: 19.04.2017
3. ಸರ್ಕಾರದ ಪತ್ರ ಸಂಖ್ಯೆ: ಇಎನ್ 27 ವಿಎಸ್‌ಸಿ 2017, ಬೆಂಗಳೂರು, ದಿನಾಂಕ: 17.04.2017.
4. ಕೆ.ಆರ್.ಇ.ಡಿ.ಎಲ್ ಪತ್ರ ಸಂಖ್ಯೆ: ಕೆ.ಆರ್.ಇ.ಡಿ.ಎಲ್/07/ಎಸ್‌ಜಿ/ಭೂಮಾಲೀಕರು/2017/874 ಮತ್ತು, ದಿನಾಂಕ: 04.02.2017 ಮತ್ತು ಕೆ.ಆರ್.ಇ.ಡಿ.ಎಲ್/07/ಎಸ್‌ಜಿ/ಭೂಮಾಲೀಕರು/ಎಫ್-280-ಸಿ/2017/1639-41 ದಿನಾಂಕ: 04.03.2017
5. ಸರ್ಕಾರದ ತಿದ್ದುಪಡಿ ಆದೇಶ ಪತ್ರ ಸಂಖ್ಯೆ: ಇಎನ್ 277 ಎನ್‌ಸಿಇ 2015, ಬೆಂಗಳೂರು, ದಿನಾಂಕ: 03.02.2017 ಮತ್ತು 04.02.2017
6. ಸರ್ಕಾರದ ಆದೇಶ ಸಂಖ್ಯೆ: ಇಎನ್ 277 ಎನ್‌ಸಿಇ 2015, ಬೆಂಗಳೂರು, ದಿನಾಂಕ: 21.01.2017
7. ಕೆ.ಆರ್.ಇ.ಡಿ.ಎಲ್ ಹಂಚಿಕೆಯ ಪತ್ರ ಸಂಖ್ಯೆ: ಕೆ.ಆರ್.ಇ.ಡಿ.ಎಲ್/ 07/ ಭೂಮಾಲೀಕತ್ವ ರೈತರು-189/ 2015/ Reg no: 42/ 835 ದಿನಾಂಕ: 16.03.2015.
8. ಸರ್ಕಾರದ ಆದೇಶ ಸಂಖ್ಯೆ: ಇಎನ್ 62 ವಿಎಸ್‌ಸಿ 2014, ಬೆಂಗಳೂರು, ದಿನಾಂಕ 9.03.2015
9. ಸರ್ಕಾರದ ಆದೇಶ ಸಂಖ್ಯೆ: ಇಎನ್ 62 ವಿಎಸ್‌ಸಿ 2014, ಬೆಂಗಳೂರು, ದಿನಾಂಕ: 26.8.2014.
10. ಅ) ಸೌರ ನೀತಿ2014-21 ಅಧಿಸೂಚನೆ ಸಂಖ್ಯೆ: ಇಎನ್ 21 ವಿಎಸ್‌ಸಿ 2014, ಬೆಂಗಳೂರು ದಿನಾಂಕ :22.5.2014 ಮತ್ತು
    ಬ) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಎನ್ 49 ವಿಎಸ್‌ಸಿ 2016, ದಿನಾಂಕ: 12.01.2017.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮಗೆ ಉಲ್ಲೇಖಿತ ಪತ್ರ (7)ರನ್ವಯ ಸೌರ ನೀತಿ 2014-21ರ ಭೂಮಾಲೀಕತ್ವವುಳ್ಳ ರೈತರ 1-3 ಮೆ.ವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಯ ವರ್ಗದಡಿಯಲ್ಲಿ **ಬೆಸ್ಕಾಂಗೆ** ವಿದ್ಯುತ್ ಸರಬರಾಜು ಮಾಡಲು ಚಿಕ್ಕಮಗಳೂರು ಜಿಲ್ಲೆಯ, **ಮೂಡಿಗೆರೆ ತಾಲ್ಲೂಕಿನ**, ಬಾಳೂರು ಗ್ರಾಮದ, ಸರ್ವೆ ಸಂಖ್ಯೆ 3/2, 5/1P-4, 78, 212/P-1, 213/1, 225/2 ರ ಜಮೀನಿನಲ್ಲಿ, **3 ಮೆ.ವ್ಯಾ** ಸಾಮರ್ಥ್ಯದ ಘಟಕವನ್ನು

# 39, "ಶಾಂತಿ ಗೃಹ", ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ,
ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕಛೇರಿ ಎದುರು,
ಅರಮನೆ ರಸ್ತೆ, ಬೆಂಗಳೂರು-560 001.
Tel: 080-2220 8109 / 2220 7851, Fax: 080-2225 7399

# 39, "Shanthi Gruha",
Bharath Scouts & Guides Building,
Opp. the Chief Post Master General Office,
Palace Road, Bengaluru - 560 001.
E-mail: kredlmd@gmail.com

ಸ್ಥಾಪಿಸಲು ಹಂಚಿಕೆ ಮಾಡಲಾಗಿತ್ತು. ತಾವುಗಳು ಉಲ್ಲೇಖಿತ ಪತ್ರ (1)ರನ್ವಯ ಈ ಸೌರ ಘಟಕದ ಹಂಚಿಕೆಯ ಸ್ಥಳವನ್ನು ಚಿತ್ರದುರ್ಗ ಜಿಲ್ಲೆಯ, **ಚಳ್ಳಕೆರೆ ತಾಲ್ಲೂಕಿನ,** ಚನ್ನಮ್ಮನಾಗತಿಹಳ್ಳಿಕಾವಲು ಗ್ರಾಮದ ಪರಶುರಾಮ ಹೋಬಳಿಯ ಸರ್ವೆ ಸಂಖ್ಯೆ 33, 18 ಮತ್ತು 36ರಲ್ಲಿ ಸೌರ ಘಟಕವನ್ನು ಸ್ಥಾಪಿಸಲು ಸ್ಥಳ ಬದಲಾವಣೆ ಕೋರಿ **ಜಮೀನಿನ ಕ್ರಯ ಪತ್ರದೊಂದಿಗೆ** ಮನವಿಯನ್ನು ಸಲ್ಲಿಸಿರುತ್ತೀರಿ.

ಸರ್ಕಾರವು ಉಲ್ಲೇಖಿತ ಆದೇಶ (5 ಮತ್ತು 6) ರಲ್ಲಿ ಸೌರ ಘಟಕ ಹಂಚಿಕೆಯಾಗಿ ಸ್ಥಳ ಬದಲಾವಣೆ ಕೋರುವ ಫಲಾನುಭಾವಿಗಳಿಗೆ ಅನ್ವಯವಾಗುವಂತೆ ಸ್ಥಳ ಬದಲಾವಣೆಗೆ ಅವಕಾಶ ಕಲ್ಪಿಸಿ ಆದೇಶಿಸಿದೆ. ಮುಂದುವರೆದು ಸರ್ಕಾರವು ಉಲ್ಲೇಖಿತ ಪತ್ರ (3) ರನ್ವಯ ಸೌರ ನೀತಿ 2014-21ಕ್ಕೆ ನೀಡಿದ ತಿದ್ದುಪಡಿ ಉಲ್ಲೇಖ [10(ಬ)] ರಲ್ಲಿ ಸೌರ ಘಟಕಗಳ ಹಂಚಿಕೆಗೆ ಸಂಬಂಧಿಸಿದಂತೆ ತಾಲ್ಲೂಕಿನಲ್ಲಿ ವಿವಿಧ ವರ್ಗಗಳಡಿ ಈವರೆಗು ಹಂಚಿಕೆ ಮಾಡಿದ ಸೌರ ಘಟಕದ ಒಟ್ಟು ಸಾಮರ್ಥ್ಯವು 200ಮೆ.ವ್ಯಾ ಮೀರಿರಬಾರದು ಎಂದು ವಿಧಿಸಿದ ಷರತ್ತು ಸದರಿ ಯೋಜನೆಗಳಿಗೆ ಅನ್ವಯಿಸುವುದಿಲ್ಲವೆಂದು ತಿಳಿಸಿರುತ್ತದೆ.

ಆದ್ದರಿಂದ ತಮ್ಮ ಉಲ್ಲೇಖಿತ ಪತ್ರ (1)ರ ಕೋರಿಕೆಯಂತೆ ಚಿತ್ರದುರ್ಗ ಜಿಲ್ಲೆಯ, **ಚಳ್ಳಕೆರೆ ತಾಲ್ಲೂಕಿನ,** ಚನ್ನಮ್ಮನಾಗತಿಹಳ್ಳಿಕಾವಲು ಗ್ರಾಮದಲ್ಲಿ ಸರ್ವೆ ಸಂಖ್ಯೆ 33, 18 ಮತ್ತು 36ರ ಜಮೀನಿನಲ್ಲಿ ಉದ್ದೇಶಿತ **3 ಮೆ.ವ್ಯಾ** ಸೌರ ವಿದ್ಯುತ್ ಘಟಕ ಸ್ಥಾಪಿಸಲು ಸ್ಥಳ ಬದಲಾವಣೆ ಕೋರಿ ಜಮೀನಿನ ಕ್ರಯ ಪತ್ರದೊಂದಿಗೆ ಸಲ್ಲಿಸಿರುವ ತಮ್ಮ ಮನವಿಯನ್ನು ಪರಿಗಣಿಸಿ ಉಲ್ಲೇಖಿತ ಸರ್ಕಾರದ ಆದೇಶ (5 ಮತ್ತು 6)ಗಳನ್ವಯ ಸೌರ ಘಟಕದ ಯೋಜನೆಯ ಸ್ಥಳ ಬದಲಾವಣೆಗೆ ಅವಕಾಶ ಕಲ್ಪಿಸಲಾಗಿದ್ದು ಮುಂದಿನ ಕ್ರಮಕ್ಕಾಗಿ ಬೆಸ್ಕಾಂ ಕಂಪನಿಯನ್ನು ಸಂಪರ್ಕಿಸಲು ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

**ವ್ಯವಸ್ಥಾಪಕ ನಿರ್ದೇಶಕರು**

**ಪ್ರತಿ ಇವರಿಗೆ:**

1. ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು- ಇದನ್ನು ಅಪರ ಮುಖ್ಯ ಕಾರ್ಯದರ್ಶಿಗಳ ಗಮನಕ್ಕೆ ತರಲು ಕೋರಲಾಗಿದೆ.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ – ಕಾರ್ಪೋರೇಟ್ ಕಛೇರಿ- ಮುಂದಿನ ಅಗತ್ಯ ಕ್ರಮಕ್ಕಾಗಿ.